ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ಸಿಇಐಜಿ/ 991 ಎಂಎಲ್ಎಸ್/ 249/15-16

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 32/2-1, ನೇ ಮಹಡಿ, ಕ್ರೆಸೆಂಟ್ ಟವರ್
ಕ್ರೆಸೆಂಟ್ ರೋಡ್, ಬೆಂಗಳೂರು 560 001
ದಿನಾಂಕ: 21-9-2015

## ಸುತ್ತೋಲೆ

ವಿಷಯ: ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಮಾಲೀಕರು, ನೊಂದಾಯಿತ ಲಿಫ್ಟ್ ಕಂಪನಿಗಳೊಂದಿಗೆ ನಿರ್ವಹಣಾ ಒಪ್ಪಂದ ಮಾಡಿಕೊಳ್ಳದೆ ಲಿಫ್ಟ್‌ಗಳನ್ನು ಉಪಯೋಗಿಸುತ್ತಿರುವ ಬಗ್ಗೆ.

---

ಲಿಫ್ಟ್ ಮಾಲೀಕರು ಲಿಫ್ಟ್ ಚಾಲನೆ ಪರವಾನಗಿ ಪಡೆದ ನಂತರ ನಿಯತಕಾಲಿಕ ನಿರ್ವಹಣೆಗಾಗಿ ನೊಂದಾಯಿತ ಲಿಫ್ಟ್ ಕಂಪನಿಗಳೊಂದಿಗೆ ನಿರ್ವಹಣಾ ಒಪ್ಪಂದವನ್ನು ಮಾಡಿಕೊಳ್ಳದೆ ಲಿಫ್ಟ್ ಉಪಯೋಗಿಸುತ್ತಿರುವ ಬಗ್ಗೆ ಆಗಿಂದಾಗ್ಗೆ ಈ ಕಚೇರಿಗೆ ದೂರುಗಳು ಬಂದಿದೆ.

ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಅಧಿನಿಯಮ 2012ರ ಸೆಕ್ಷನ್ 14(3) ಹಾಗೂ 15(1)ರ ಅನುಸಾರ ಲಿಫ್ಟ್ ನಿರ್ವಹಣೆಗಾಗಿ ಲಿಫ್ಟ್ ಮಾಲೀಕರು ಮತ್ತು ನೊಂದಾಯಿತ ಲಿಫ್ಟ್ ಕಂಪನಿಗಳು ನಿರ್ವಹಣಾ ಒಪ್ಪಂದವನ್ನು ಮಾಡಿಕೊಂಡು ಲಿಫ್ಟ್ ನಿರ್ವಹಣೆ ಮಾಡಬೇಕಾಗಿರುತ್ತದೆ.

ಕಾಲ ಕಾಲಕ್ಕೆ ಸರಿಯಾಗಿ ಲಿಫ್ಟ್‌ಗಳ ನಿರ್ವಹಣೆ ಮಾಡದಿರುವುದು, ಕಡಿಮೆ ಬೆಲೆಯ ಮತ್ತು ಕಳಪೆ ಗುಣಮಟ್ಟದ ಬಿಡಿ ಭಾಗಗಗಳನ್ನು ಉಪಯೋಗಿಸುವುದು ಲಿಫ್ಟ್ ಅಪಘಾತಗಳು ಸಂಭವಿಸಲು ಕಾರಣಗಳೊಲ್ಲೊಂದಾಗಿವೆ.

ಆದ್ದರಿಂದ ಈ ಬಗ್ಗೆ ಲಿಫ್ಟ್ ಮಾಲೀಕರಲ್ಲಿ ಅರಿವು ಮೂಡಿಸಲು, ಎಲ್ಲಾ ಕ್ಷೇತ್ರಿಯ ಅಧಿಕಾರಿಗಳು ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ನಿಯತಕಾಲಿಕ ಪರಿವೀಕ್ಷಣೆಯ ಸಮಯದಲ್ಲಿ ಲಿಫ್ಟ್ ಮಾಲೀಕರು, ತಮ್ಮ ಲಿಫ್ಟ್‌ಗಳನ್ನು ನಿರ್ವಹಣೆಗಾಗಿ ನೊಂದಾಯಿತ ಲಿಫ್ಟ್ ಕಂಪನಿಗಳೊಂದಿಗೆ ನಿರ್ವಹಣಾ ಒಪ್ಪಂದ ಮಾಡಿಕೊಳ್ಳುವಂತೆ ತಿಳಿಸಿ, ನಿರ್ವಹಣೆಗಾಗಿ ಕರಾರು ಮಾಡಿಕೊಂಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಸೂಚಿಸಿದೆ.

ಇಲ್ಲದಿದ್ದಲ್ಲಿ ಅಂತಹ ಲಿಫ್ಟ್ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ, ಲಿಫ್ಟ್ ಮಾಲೀಕರಿಗೆ ಕಡ್ಡಾಯವಾಗಿ ನೊಂದಾಯಿತ ಲಿಫ್ಟ್ ಕಂಪನಿಗಳೊಂದಿಗೆ ನಿರ್ವಹಣೆ ಒಪ್ಪಂದ ಮಾಡಿಕೊಳ್ಳಬೇಕಾಗಿ ತಿಳಿಸಲು ಈ ಮೂಲಕ ಸೂಚಿಸಲಾಗಿದೆ. ಲಿಫ್ಟ್ ಮಾಲೀಕರು ನೋಟಿಸ್ ಜಾರಿ ಗೊಳಿಸಿದ ನಂತರವು ನಿರ್ವಹಣೆ ಒಪ್ಪಂದ ಮಾಡಿಕೊಳ್ಳದಿದ್ದಲ್ಲಿ ಅಂತಹ ಲಿಫ್ಟ್ ಸ್ಥಾವರಗಳಿಗೆ ಲಿಫ್ಟ್ ಚಾಲನಾ ಪರವಾನಗಿಯನ್ನು ಅಮಾನತ್ತುಗೊಳಿಸಲು ಅಥವಾ ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕಾಗಿ ಸೂಚಿಸಲಾಗಿದೆ.

ಮುಂದುವರೆದು, ಹತ್ತು ವರ್ಷಗಳಷ್ಟು ಹಳೆಯದಾದ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಚಾಲನಾ ಪರವಾನಗಿಗಳನ್ನು ಲಿಫ್ಟ್ ಮಾಲೀಕರು ನವೀಕರಿಸಬೇಕಾಗಿರುವುದರಿಂದ ನಿಯತಕಾಲಿಕ ಪರಿವೀಕ್ಷಣೆ ಸಮಯದಲ್ಲಿ ಲಿಫ್ಟ್ ಮಾಲೀಕರಿಗೆ ಈ ಬಗ್ಗೆ ಅರಿವು ಮೂಡಿಸಿ, ಲಿಫ್ಟ್ ಚಾಲನಾ ಪರವಾನಗಿಗಳನ್ನು ನವೀಕರಿಸಲು ತಿಳಿಸುವಂತೆ ಈ ಮೂಲಕ ಸೂಚಿಸಿದೆ.

21/9/15

ಮುಖ್ಯ ವಿದ್ಯುತ್ ಪರಿವೀಕ್ಷಕರು
Chief Electrical Inspector to Govt
Electrical Inspectorate,
Bangalore.

ಪ್ರತಿಯನ್ನು: ಕೆಳಕಂಡವರಿಗೆ ಮಾಹಿತಿಗಾತಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

1. ಎಲ್ಲಾ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು
2. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
3. ಎಲ್ಲಾ ವಿದ್ಯುತ್ ಪರಿವೀಕ್ಷಕರು
4. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು.
5. ಸೂಚನಾ ಫಲಕ
6. ಕಚೇರಿ ಕಡತ / ಪ್ರಧಾನ ಕಡತ